**ಸಾಕ್ಷಿಗೆ ದಿನಾಂಕ:24-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನಾನು ವಾದಿಯ ವಿರುದ್ದ ಮತ್ತೊಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯ ಸಂಖ್ಯೆ ನನಗೆ ಈಗ ನೆನಪಿಲ್ಲ. ಸದರಿ ದಾವೆಯಲ್ಲಿ ನಾನು ವಾದಿ ಹಾಗೂ ಅವರ ಗಂಡನನ್ನು ಪ್ರತಿವಾದಿಗಳಾನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನನ್ನ ಆಸ್ತಿಯ ಮೇಲೆ ಘೋಷಣಾತ್ಮಕ ಪರಿಹಾರಿ ಕೋರಿ ಹೂಡಿರುತ್ತೇನೆ. ಪ್ರಸ್ತುತ ದಾವೆಯನ್ನು ವಾದಿಯು ನನ್ನ ಜಾಗದಲ್ಲಿ ಓಡಾಡಲು ದಾರಿ ಕೋರಿ ಹೂಡಿರುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ಜಾಗದ ಸರ್ವೇ ನಂಬರ್ ಹಾಗೂ ವಾದಿಯ ಜಾಗದ ಸರ್ವೇ ನಂಬರ್ ಬೇರೆ ಆಗಿರುತ್ತದೆ. ನನ್ನ ಸರ್ವೇ ನಂಬರ್ 80/2 ಆಸ್ತಿಯನ್ನು 2012 ರಲ್ಲಿ ನಾನು ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಸದರಿ ಆಸ್ತಿಗೆ ಸಂಬಂಧಪಟ್ಟಂತೆ ತಾಲ್ಲೂಕು ಕಚೇರಿಯಲ್ಲಿ ಪರಿಶೀಲನೆ ಮಾಡಿರುತ್ತೇನೆ. ಯಾವ ದಾಖಲೆ ಪರಿಶೀಲನೆ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಾನು ಸದರಿ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಸದರಿ ಆಸ್ತಿಗೆ ಸಂಬಂಧಪಟ್ಟಂತೆಯೇ ನ್ಯಾಯಾಲಯದಲ್ಲಿ ಅಸಲು ದಾವಾ 131/2012 ರಿಂದ 133/2012 ರಂತೆ ದಾವೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗಳನ್ನು ವಾದಿ, ವಾದಿಯ ಗಂಡ ಹಾಗೂ ವಿನಿಯಟ್ ವಿಲಿಯಂ ಎನ್ನುವವರು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ಕಂಡು ಬರುವ ಮನೆಯನ್ನು ಈಗ ಹೇಳಿದ ವಿನಿಯಟ್ ವಿಲಿಯಂ ರವರ ಮನೆ ಎಂದು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ25 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಅಸಲು ದಾವಾ 131/2012 ರಿಂದ 133/2012 ಗಳಲ್ಲಿ ಈ ದಾವೆಯಲ್ಲಿ 2ನೇ ಪ್ರತಿವಾದಿ/ಸಲ್ಲಾವುದ್ದೀನ್ ಸದರಿ ದಾವೆಯ ಪ್ರತಿವಾದಿ ಆಗಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಸದರಿ 3 ದಾವೆಗಳು ರಾಜಿಯಲ್ಲಿ ಅಂತ್ಯವಾಗಿದ್ದು ಸದರಿ ರಾಜೀ ಪತ್ರದಲ್ಲಿ 2ನೇ ಪ್ರತಿವಾದಿ ತನಗೂ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: